**ಸಾಕ್ಷಿಗೆ ದಿನಾಂಕಃ 07.03.2026 ರಂದು ಪ್ರಮಾಣ ಮಾಡಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಶ್ರೀ. ಎಸ್.ಬಿ. ವಕೀಲರಿಂದಃ**

ನಿ.ಪಿ.6 ರಿಂದ 9 ರಲ್ಲಿ ಫೋಟೋಗಳಲ್ಲಿ ಕಾಣಿಸುವ ಜಾಗಕ್ಕೆ ವಾದಿ ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಈ ದಾವೆಯ ವಿಚಾರಗಳನ್ನು ತಿಳಿದುಕೊಂಡಿರುತ್ತೇನೆ. ವಾದಿಗಳು ದಾವಾ ಸ್ವತ್ತಿನ ಪೋಡು ತಪ್ಪಾಗಿದೆ ಎಂದು ಸಂಬಂಧಪಟ್ಟ ಇಲಾಖೆಗೆ ಅರ್ಜಿ ಸಲ್ಲಿಸಿರುವುದಿಲ್ಲ ಎಂದರೆ ಸರಿ. ಸರ್ವೆ ನಂ.315/2 ರಲ್ಲಿ ಪೋಡಿನ ವ್ಯತ್ಯಾಸ ಆಗಿರುತ್ತದೆ. ಸದರಿ ಸರ್ವೆ ನಂಬರಿನಲ್ಲಿ 27 ಗುಂಟೆ ಜಮೀನು ಇರುತ್ತದೆ. ಸದರಿ ಸ್ವತ್ತು ಮೂಲತಃ ನಮಗೆ ಸೇರಿರುತ್ತದೆ. ಸದರಿ ಸ್ವತ್ತಿನ ಚೆಕ್ಕುಬಂದಿ ಪೂರ್ವಕ್ಕೆ ಖಾಸಗಿ ಜಮೀನು, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಸರ್ವೆ ನಂ.312, ದಕ್ಷಿಣಕ್ಕೆ ಓಣಿ ಇರುತ್ತದೆ. ಸರ್ವೆ ನಂ.315/2 ರ ಪೂರ್ವಕ್ಕೆ ಸರ್ವೆ ನಂ.315/3 ಬರುತ್ತದೆ. 315/3 ಮತ್ತು 4 ಕ್ಕೆ ಸಂಬಂಧಿಸಿದಂತೆ ಯಾವುದೇ ವಿವಾದ ಇರುವುದಿಲ್ಲ. ನಮ್ಮ ಸರ್ವೆ ನಂ.315/2 ಮತ್ತು 6 ವ್ಯತ್ಯಾಸ ಇದ್ದಿದ್ದರಿಂದ ಅನುಭವದಂತೆ ಪೋಡಿ ಮಾಡಿ ಎಂದು ಸರ್ವೆ ನಂ.315/3 ಮತ್ತು 4 ನ್ನು ಸೇರಿಸಿ ಅರ್ಜಿ ಸಲ್ಲಿಸಿದ್ದೆನು.

2023 ರ ಹಿಂದೆ ಸರ್ವೆ ನಂ.315/6 ನಮ್ಮ ಹೆಸರಿನಲ್ಲಿ ಇರುವುದರ ಬಗ್ಗೆ ದಾಖಲೆ ಇರುವುದಿಲ್ಲ. ಸರ್ವೆ ನಂ.315/1 ರಿಂದ 7 ಎಷ್ಟೇ ಬಾರಿ ಪೋಡಿ ಆದರೂ ಇರುವ ಚೆಕ್ಕುಬಂದಿ ಮತ್ತು ವಿಸ್ತೀರ್ಣ ಬದಲಾಗುವುದಿಲ್ಲ ಎಂದರೆ ಸರಿ. ನಾನು ಹಾಜರುಪಡಿಸಿದ ದಾಖಲೆಗಳಲ್ಲಿ ಸರ್ವೆ ನಂ.315/6 ದಾಖಲೆ ಇರುವುದಿಲ್ಲ ಎಂದರೆ ಸರಿ. ಸರ್ವೆ ನಂ.315/6 ಮತ್ತು 7 ರ ಚೆಕ್ಕುಬಂದಿಯನ್ನು ನನ್ನ ತಕರಾರಿನಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನಿ.ಪಿ.6 ರಂದ 9 ಪೋಟೋಗಳಲ್ಲಿ ಕಾಣಿಸುವ ಜಾಗದಲ್ಲಿ ನಾನು ಅಭಿವೃದ್ಧಿಪಡಿಸುತ್ತೇನೆ ಎಂದು ಹೋದಾಗ ವಾದಿ ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಈ ದಾವೆಯ ಚೆಕ್ಕು ಬಂದಿಯನ್ನು ನಾನು ತಿಳಿದುಕೊಂಡಿರುವುದಿಲ್ಲ. ಸರ್ವೆ ನಂ.315/6 ರ ಪೂರ್ವದ ನೀರು ಹೋಗುವ ಹಳ್ಳ ಇರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂ.315/2 ಮತ್ತು 3 ರ ಅಕ್ಕಪಕ್ಕ ಏನು ಬರುತ್ತದೆ ಎಂದು ನನಗೆ ಗೊತ್ತು. ಸದರಿ ಜಮೀನಿನ ಅಕ್ಕಪಕ್ಕ ವಾದಿಯು ದಾವಾ ಸ್ವತ್ತಿನಲ್ಲಿ ವ್ಯವಸಾಯ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.315/6 ರ ದಕ್ಷಿಣಕ್ಕೆ ರಸ್ತೆ ಇರುತ್ತದೆ ಎಂದರೆ ಸರಿ. ಸರ್ವೆ ನಂ.315/6 ರ ಪಶ್ಚಿಮ ಮತ್ತು ಉತ್ತರ ಭಾಗದಲ್ಲಿ ಮಾದನಾಯಕ ಮತ್ತು ಪುಟ್ಟನಂಜಮ್ಮನವರ ಜಮೀನು ಬರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಸರ್ವೆ ನಂ.315/6 ಕ್ಕೆ ಆದೇಶ ಆದರೆ ನಮಗೆ ತೊಂದರೆ ಆಗುತ್ತದೆ. ಸರ್ವೆ ನಂ.315/6 ಮತ್ತು ಸರ್ವೆ ನಂ.315/7 ಬೇರೆ ಬೇರೆ ಜಮೀನು ಎಂದರೆ ಸರಿ. ತಹಸೀಲ್ದಾರ್ ರವರು ಸರ್ವೆ ನಂ.315/6 ರಲ್ಲಿ ವಾದಿಗೆ 30 ಗುಂಟೆ ಇದೆ ಎಂದು ಆದೇಶ ಮಾಡಿರುತ್ತಾರೆ ಎಂದರೆ ಸರಿ. ನನ್ನ ತಕರಾರಿನಲ್ಲಿ ವಾದಿಗೆ ಸರ್ವೆ ನಂ.315/6 ರಲ್ಲಿ 30 ಗುಂಟೆ ಜಮೀನು ಇರುತ್ತದೆ ಎಂದು ಹೇಳಿರುತ್ತೇನೆ ಎಂದರೆ ಸರಿ. ವಾದಿಯು ಒಬ್ಬರೇ ವಾಸವಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ರಸ್ತೆಯ ಅಂಚಿನಲ್ಲಿ ಬರುತ್ತದೆ ಎಂದರೆ ಸರಿಯಲ್ಲ. ನಿ.ಡಿ..48 ರಿಂದ 53 ರಲ್ಲಿ ಕಾಣಿಸುವ ಜಾಗವು ದಾವಾ ಸ್ವತ್ತು ಆಗಿರುತ್ತದೆ ಎಂದರೆ ಸರಿಯಲ್ಲ. ದುರಸ್ತಿಗಾಗಿ ಸಲ್ಲಿಸಿದ ಅರ್ಜಿಯನ್ನು ಹಾಜರುಪಡಿಸಿರಬಹುದು. ಡಿ.ಡಿ.ಎಲ್.ಆರ್. ರವರ ಆದೇಶವನ್ನು ಹಾಜರುಪಡಿಸಿರುತ್ತೇನೆ. ಡಿ.ಡಿ.ಎಲ್.ಆರ್. ಕಛೇರಿಗೆ ವಾದಿ ಹಾಜರಿರುವುದಿಲ್ಲ ಹಾಗೂ ತಕರಾರನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾಸ್ವತ್ತು ಮುಖ್ಯ ರಸ್ತೆಯ ಅಂಚಿನಲ್ಲಿ ಬರುತ್ತಿದ್ದು, ಅದಕ್ಕೆ ಹೆಚ್ಚಿನ ಬೆಲೆ ಇರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತನ್ನು ಲಪಟಾಯಿಸುವ ಉದ್ದೇಶದಿಂದ ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. 1981 ರಿಂದ ವಾದಿಯು ದಾವಾ ಸ್ವತ್ತಿನ ಸ್ವಾಧೀನವನ್ನು ಹೊಂದಿರುತ್ತಾರೆ ಎಂದರೆ ಸರಿಯಲ್ಲ. 2023 ರ ತನಕ ನಾವು ಮತ್ತು ವಾದಿ ಚೆನ್ನಾಗಿದ್ದೆವು ಎಂದರೆ ಸರಿ. ವಾದಿಯ ಸ್ವತ್ತಿನಲ್ಲಿ ಅಭಿವೃದ್ಧಿ ಮಾಡಲು ಹೋದಾಗ ಗಲಾಟೆ ಆಗಿರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಸ್ವಾಧೀನವನ್ನು ವಾದಿಯು ಹೊಂದಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**

**ಮತ್ತು ಪ್ರ.ದ.ನ್ಯಾದಂ. ತಿ.ನರಸೀಪುರ.**